ಬೆಲೆ ರೂ.2.50
D.O.P - 15th of every month at Udupi Head Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಮಾರ್ಚ್ 2022

॥ ಧಿಯೋ ಯೋನಃ ಪ್ರಚೋದಯಾತ್ ॥

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2958444
ಸಂಪುಟ-22 ಸಂಚಿಕೆ-3 ಪುಟಗಳು-6 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಆಚರಣೆ







ಉಡುಪಿ ಕುಂಜಿಬೆಟ್ಟು ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಶ್ರೀ ಶಾರದಾ ದೇವಸ್ಥಾನದಲ್ಲಿ ದಿನಾಂಕ 01.03.2022ನೇ ಮಂಗಳವಾರದಂದು ಪೂರ್ವಾಹ್ನ 9.00 ಗಂಟೆಗೆ ಪ್ರಾರ್ಥನೆಯೊಂದಿಗೆ ಮಹಾಶಿವರಾತ್ರಿ ಕಾರ್ಯಕ್ರಮವು ಪ್ರಾರಂಭವಾಯಿತು. ಋತ್ವಿಜರಾದ ಪಾವಂಜೆ ಸುಬ್ರಹ್ಮಣ್ಯ ಉಪಾಧ್ಯಾಯರು ಹಾಗೂ ಪಾವಂಜೆ ಭವಾನಿಶಂಕರ ಉಪಾಧ್ಯಾಯರು ಮಹಾಶಿವರಾತ್ರಿಯ ಪ್ರಯುಕ್ತ ವಿಶೇಷ ಧಾರ್ಮಿಕ ಕಾರ್ಯಕ್ರಮಗಳನ್ನು ಶಾಸ್ತೋಕ್ತವಾಗಿ ನೆರವೇರಿಸಿದರು. ಸ್ವಾಧ್ಯಾಯ ತಂಡದವರು ರುದ್ರ ಪಾರಾಯಣ ಮಾಡಿದರು. ಪೂರ್ವಾಹ್ನ 10.00 ಗಂಟೆಗೆ ಭಜನಾ ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಪ್ರಾರಂಭಗೊಂಡಿತು. ಮಹಾಶಿವರಾತ್ರಿ ಧಾರ್ಮಿಕ ಕಾರ್ಯಕ್ರಮದ ಪ್ರಾಯೋಜಕರಾದ ಶ್ರೀಮತಿ ಸುಕನ್ಯಾ ಮತ್ತು ಶ್ರೀ ಪಿ. ಸತೀಶ ರಾವ್ ದಂಪತಿಗಳು ಭಜನಾ ಕಾರ್ಯಕ್ರಮವನ್ನು ದೀಪ ಬೆಳಗಿಸುದರೊಂದಿಗೆ ಉದ್ಘಾಟಿಸಿದರು. ಇವರೊಂದಿಗೆ ನಮ್ಮ ಸಂಘದ ಅಧ್ಯಕ್ಷರಾದ ಕೆ.ಮಂಜುನಾಥ್ ಹೆಬ್ಬಾರ್ ಮತ್ತು ಕಾರ್ಯದರ್ಶಿಗಳಾದ ಶ್ರೀ ಪಿ.ಪ್ರಭಾಕರ ಭಂಡಿ ಹಾಗೂ ಸಲಹೆಗಾರರು ಜೊತೆಗಿದ್ದರು. ಮೊದಲು ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಪಡುಬಿದ್ರೆ ಇಲ್ಲಿಯ ಮಹಿಳಾ ಭಜನಾ ತಂಡದಿಂದ ಭಜನಾ ಕಾರ್ಯಕ್ರಮವು ನೆರವೇರಿತು. ಇವರಿಗೆ ಶ್ರೀ ಸತೀಶ ರಾವ್ ದಂಪತಿಗಳು ಸ್ಮರಣಿಕೆ ನೀಡಿ ಗೌರವಿಸಿದರು. ನಂತರ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿ ಇಲ್ಲಿಯ ಮಹಿಳಾ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ ನಡೆಯಿತು. ಭಜನಾ ತಂಡದವರಿಗೂ, ರುದ್ರ ಪಾರಾಯಣ ಮಾಡಿದ ನಮ್ಮ ಸಮಾಜದ ಸ್ವಾಧ್ಯಾಯ ತಂಡದವರಿಗೂ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಂಘದ ಅಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ, ಸಂಘದ ಪದಾಧಿಕಾರಿಗಳು ಹಾಗೂ ಸಲಹೆಗಾರರು ಉಪಸ್ಥಿತರಿದ್ದರು. ಶ್ರೀ ಶಾರದಾ ದೇವಸ್ಥಾನದಲ್ಲಿ ನಮ್ಮ ಸಮಾಜ ಬಾಂಧವರು ಮತ್ತು ಸಾರ್ವಜನಿಕರಿಂದ ರುದ್ರಾಭಿಷೇಕ ಸೇವೆಯು ನೆರವೇರಿತು. ಅಪರಾಹ್ನ 12.30ಕ್ಕೆ ಮಹಾಶಿವರಾತ್ರಿ ವಿಶೇಷ ಮಹಾಪೂಜೆಯನ್ನು ನೆರವೇರಿಸಲಾಯಿತು. ನಂತರ ಫಲಹಾರ ಕಾರ್ಯಕ್ರಮದೊಂದಿಗೆ ಮಹಾಶಿವರಾತ್ರಿಯು ಸಂಪನ್ನಗೊಂಡಿತು. ಈ ಎಲ್ಲಾ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ನಡೆಸಲು ಸಂಘದ ಎಲ್ಲಾ ಪದಾಧಿಕಾರಿಗಳು ಹಾಗೂ ಸಮಾಜ ಬಾಂಧವರು ಸಹಕರಿಸಿದರು.



ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಮಾಜಿ ನಿರ್ದೇಶಕರು, ಕೊಡುಗೈ ದಾನಿಗಳೂ ಆದ ಮಾಂಟ್ರಾಡಿ ಮೋಹನ ರಾವ್‌ರವರು ಸುಮಾರು ರೂ.5,000/- ಮೌಲ್ಯದ ಎರಡು ಡಿಜಿಟಲ್ ಗಡಿಯಾರಗಳನ್ನು ಶಿವರಾತ್ರಿಯ ಸಂದರ್ಭದಲ್ಲಿ ಶ್ರೀ ಶಾರದಾ ಮಂಟಪಕ್ಕೆ ಕೊಡುಗೆಯಾಗಿ ನೀಡಿರುತ್ತಾರೆ. ಅವರಿಗೆ ಶ್ರೀ ಶಾರದಾ ಬಳಗದ ಅಭಿನಂದನೆಗಳು.



ಶ್ರೀಮತಿ ಸುಕನ್ಯಾ ಹಾಗೂ ಶ್ರೀ ಪಿ.ಸತೀಶ್ ರಾವ್ ದಂಪತಿಗಳು ಶ್ರೀ ಶಾರದಾ ಮಂಟಪದಲ್ಲಿ ನಡೆದ ಮಹಾಶಿವರಾತ್ರಿ ಕಾರ್ಯಕ್ರಮದ ಸಂಪೂರ್ಣ ಪ್ರಾಯೋಜಕತ್ವವನ್ನು ಭರಿಸಿರುತ್ತಾರೆ. ಈ ಸಂದರ್ಭದಲ್ಲಿ ಅವರನ್ನು ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ್ ಹೆಬ್ಬಾರ್ ಸಂಘದ ವತಿಯಿಂದ ಸ್ಮರಣಿಕೆ ನೀಡಿ ಗೌರವಿಸಿದರು.

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ-2.



ಪ್ರಿಯರೇ,

ಸ್ವಸ್ತಿ ಶ್ರೀ ಶುಭಕೃತ್ ನಾಮ ಸಂ|ರದ
ಚೈತ್ರ ಶುಕ್ಲ 1ಯು ತಾ.02-04-2022ನೇ ಶನಿವಾರದಿಂದ
ಚೈತ್ರ ಶುಕ್ಲ 9ಯು ತಾ.10-04-2022ನೇ ಆದಿತ್ಯವಾರ ರಾಮನವಮಿಯ ತನಕ

**ಕಿರುನವರಾತ್ರಿ ಉತ್ಸವವು**

ಶ್ರೀ ಶಾರದಾ ದೇವಸ್ಥಾನದಲ್ಲಿ ಜರಗಲಿರುವುದು.
ಈ ಪ್ರಯುಕ್ತ ಪ್ರತಿದಿನ ಸಂಜೆ ದೇವಿಗೆ ವಿಶೇಷ ಪೂಜೆ ನೆರವೇರಲಿದೆ.



ಶ್ರೀ ಶಾರದಾ ದೇವಸ್ಥಾನದಲ್ಲಿ

**ಶ್ರೀ ಶಂಕರ ಜಯಂತಿ ಆಚರಣೆಯು**



ತಾ.06-05-2022ನೇ ಶುಕ್ರವಾರ ನೆರವೇರಲಿದೆ.



ಕಾರ್ಯಕ್ರಮಗಳ ವಿವರ : ಬೆಳಿಗ್ಗೆ 8-30 ಗಂಟೆಗೆ ಪ್ರಾರ್ಥನೆ, ರುದ್ರಾಭಿಷೇಕ, ಪಾರಾಯಣ, ಶ್ರೀ ಶಂಕರಾಚಾರ್ಯರ ಮೂರ್ತಿಗೆ ಅಭಿಷೇಕ ಹಾಗೂ ಪೂಜೆ, ಬೆಳಿಗ್ಗೆ 11 ಗಂಟೆಗೆ ಉಪನ್ಯಾಸ ಕಾರ್ಯಕ್ರಮ ಮತ್ತು ಮಧ್ಯಾಹ್ನ 12-30ಕ್ಕೆ ಅನ್ನಸಂತರ್ಪಣೆ ನಡೆಯಲಿದೆ.

-ಆಡಳಿತ ಮಂಡಳಿ

**ಸಾಮೂಹಿಕ ಉಪನಯನ**

ಈ ವರ್ಷ **ಸಾಮೂಹಿಕ ಉಪನಯನ**ವು ಅಕ್ಷಯ ತದಿಗೆಯ ಶುಭ ದಿನವಾದ ತಾ.03-05-2022ರ ಮಂಗಳವಾರದಂದು ನಡೆಯಲಿದ್ದು ತಮ್ಮ ವಟುಗಳಿಗೆ ಉಪನಯನ ಸಂಸ್ಕಾರ ನಡೆಸುವರೇ ಆಸಕ್ತ ಸಮಾಜ ಬಾಂಧವರು ಸಂಘದ ಕಛೇರಿಯನ್ನು 0820-2958444ನಲ್ಲಿ ಸಂಪರ್ಕಿಸಬೇಕಾಗಿ ಕೋರುತ್ತೇವೆ.

HARIKRISHNA DIGITALS
5-244-A1, SRIRANGA, First Floor, V. P. Nagar, 3rd Main, Kunjibettu Post - 576102, Udupi District


WE UNDERTAKE
* All types Outdoor and Indoor Photography & Videography
* Pre-wedding shoot * Post-wedding shoot * Passport Photography
* Photo Frames * Digital album creations
* Digitalisation of Old album
* Athorised Udayavani Advertisement Agency
* Offset, Screen, Digital & Banner Printing
* All types of Invitations * Project works of Schools & Colleges
* Book design & printing * Visiting cards
* A4 and A3 Black-White and Colour Printing and Xerox



+91 94487 24161, +91 94816 10371, +91 7019367390 E-mail : harikrishnadigitals2003@gmail.com





ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ಶಿವರಾತ್ರಿಯ ಸಂದರ್ಭ ನಡೆದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಉಡುಪಿ ಹಾಗೂ ಪಡುಬಿದ್ರೆ ಭಜನಾ ತಂಡಗಳು

## ಡಾ. ವೈ. ರವೀಂದ್ರನಾಥ್ ರಾವ್‌ರವರಿಗೆ ಸುಲಭ್ ಗೌರವ್ ಪ್ರಶಸ್ತಿ




ಇತ್ತೀಚೆಗೆ ನವದೆಹಲಿಯಲ್ಲಿ ಸುಲಭ್ ಅಂತರಾಷ್ಟ್ರೀಯ ಸಂಸ್ಥೆಯ 52ನೆಯ ಸ್ಥಾಪಕ ದಿನಾಚರಣೆಯ ಸಂದರ್ಭ ಎರಡು ದಿನ ನಡೆದ ಅಧಿವೇಶನದಲ್ಲಿ ಖ್ಯಾತ ಸಂಶೋಧಕ, ಸಮಾಜಶಾಸ್ತ್ರಜ್ಞ, ಎಸ್.ಎಂ.ಎಸ್ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ.ವೈ. ರವೀಂದ್ರನಾಥ್ ರಾವ್ ಇವರನ್ನು ಸಮಾರಂಭದ ಮತ್ತು ವಿಚಾರಗೋಷ್ಠಿಯ ಅಧ್ಯಕ್ಷರಾಗಿ ನೇಮಿಸಿ ಸುಲಭ್ ಸಂಸ್ಥೆಯ ಸ್ಥಾಪಕ, ಸಮಾಜ ಸುಧಾರಕ ಡಾ। ಬಿಂದೇಶ್ವರ್ ಪಾಠಕ್ ಅವರು ನಗದು ಬಹುಮಾನದೊಂದಿಗೆ ಸುಲಭ್ ಪ್ರಶಸ್ತಿ ನೀಡಿ ಗೌರವಿಸಿದರು. ದೇಶ ವಿದೇಶಗಳಲ್ಲಿ ಸಂಶೋಧನೆ, ಶೌಚಾಲಯ ಸಮಾಜ ಶಾಸ್ತ್ರ, ಸುಲಭ್ ಶೈಕ್ಷಣಿಕ ಸಮಿತಿಯ ಸಲಹೆಗಾರರಾಗಿ ಡಾ. ರಾವ್ ನೀಡಿದ ಕೊಡುಗೆಗಳಿಗಾಗಿ ಈ ಗೌರವ ಪ್ರಶಸ್ತಿ ನೀಡಲಾಗಿದೆ. ಇವರು ನಮ್ಮ ಸಂಘದಲ್ಲಿ ಮಾಜಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.

## 25ನೇ ರಾಷ್ಟ್ರೀಯ ಯುವ ಉತ್ಸವ 2022ಕ್ಕೆ ಆಯ್ಕೆ



ಕು. ಅರ್ಚನಾ ಇವರು ದ್ವಿತೀಯ B.Sc., ವಿವೇಕಾನಂದ ಪದವಿ ಕಾಲೇಜು, ಪುತ್ತೂರು ಇಲ್ಲಿ ವ್ಯಾಸಂಗ ಮಾಡುತ್ತಿದ್ದು, ಧಾರವಾಡದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಪ್ರಾದೇಶಿಕ ನಿರ್ದೇಶನಾಲಯ ಇವರ ಆಶ್ರಯದಲ್ಲಿ ನಡೆಯುವ 25ನೇ ರಾಷ್ಟ್ರೀಯ ಯುವ ಉತ್ಸವ 2022ಕ್ಕೆ ಆಯ್ಕೆಯಾಗಿರುವುದು ನಮ್ಮ ಸಮಾಜಕ್ಕೆ ಹೆಮ್ಮೆಯ ವಿಷಯವಾಗಿರುತ್ತದೆ. ವಿಟ್ಲದ ಶ್ರೀಯುತ ಹರಿಪ್ರಸಾದ್ (ಮನು) ಮತ್ತು ಶ್ರೀಮತಿ ಭವ್ಯಾ ರವರ ಸುಪುತ್ರಿ. ಹಾಗೂ ಸದಾ ಚಟುವಟಿಕೆಗಳ ಚೆಲುಮೆಯಾಗಿರುವ ತಮಗೆ ಸದಾ ಯಶಸ್ಸನ್ನು ಹಾರೈಸುತ್ತೇವೆ.

## ಆಶಾ ಅರವಿಂದ್‌ಕುಮಾರ್‌ರವರಿಗೆ ಬೀಳ್ಕೊಡುಗೆ



ನಮ್ಮ ಸಂಘದ ಉಪಾಧ್ಯಕ್ಷರಾದ ಯು. ಅರವಿಂದ ಕುಮಾರ್ ಅವರ ಪತ್ನಿ ಆಶಾ ಟಿ. ಇತ್ತೀಚೆಗೆ ಕುಕ್ಕೆಹಳ್ಳಿ ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯಿನಿಯಾಗಿ ಸ್ವಯಂ ನಿವೃತ್ತಿ ಹೊಂದಿದ ಸಂದರ್ಭದಲ್ಲಿ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರು ಕಾಪು ಕ್ಷೇತ್ರದ ಶಾಸಕರಾದ ಲಾಲಾಜಿ ಆರ್.ಮೆಂಡನ್ ಹಾಗೂ ಸ್ಥಳೀಯರು ಅಭಿನಂದಿಸಿ ಬೀಳ್ಕೊಟ್ಟರು.

ಶ್ರೀಮತಿ ಆಶಾರವರು ತಮ್ಮ ವೃತ್ತಿಜೀವನವನ್ನು 1985ರಲ್ಲಿ ಮಂಗಳೂರಿನ ಪ್ರೌಢಶಾಲೆಯಲ್ಲಿ ಶಿಕ್ಷಕಿಯಾಗಿ ಪ್ರಾರಂಭಿಸಿ 1990ರಿಂದ ಉಡುಪಿಯ ವಳಕಾಡು ಪ್ರೌಢಶಾಲೆಯಲ್ಲಿ ಸುಮಾರು 2 ದಶಕಗಳ ಕಾಲ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದರು. ಬಳಿಕ ಪದೋನ್ನತಿ ಹೊಂದಿ ಉಡುಪಿಯ ಡಯೆಟ್‌ನಲ್ಲಿ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸಿ, ನಂತರ ಅಜ್ಜರಕಾಡು ಹಾಗೂ ಕುಕ್ಕೆಹಳ್ಳಿ ಪ್ರೌಢಶಾಲೆಯಲ್ಲಿ ಮುಖ್ಯಶಿಕ್ಷಕಿಯಾಗಿ ಸೇವೆಸಲ್ಲಿಸಿ ಇತ್ತೀಚೆಗೆ ತಮ್ಮ ಒಟ್ಟು 36 ವರ್ಷಗಳ ಸೇವೆಯಿಂದ ಸ್ವಯಂ ನಿವೃತ್ತಿಯನ್ನು ಹೊಂದಿದರು.

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ "ಗೃಹ ಸಾಲ" ಸಂಘದ ಪ್ರಾಥಮಿಕ ಸದಸ್ಯರಿಗೆ 10.00% (ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 11.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11% |

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ

PRODUCTS ARE AVAILABLE AT ATTRACTIVE DISCOUNT PRICES




BATTERY PLANET
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990



Dr. Sanath S. Rao
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com
JALAJA SKIN CLINIC
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS
Sri Balaji Complex, Shop No-G-7, Near KSRTC Bus Stand, Udupi - 576101.
City Towers, Service Bus Stand, Near Rao and Rao Circle, State Bank, Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala



ಡಾ। ವಿಜಯಾ ರಾವ್ ವೈ.ಬಿ
ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು
Dr. Vijaya Rao Y.B.
MBBS DGO (DNB)
Consultant Obst. & Gynaecologist
Reg. No. 34499
Mobile : 9481230608
Email : vijayayb12@gmail.com
Indrani Maternity Clinic, Aisiri Complex,
Near Railway Station Bus Stop, Kunjibettu Post, Udupi - 576 102

## ಡೀನ್ ಆಗಿ ಡಾ| ಪ್ರಶಾಂತ ಆಯ್ಕೆ



ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿವಿಧ ಭಾರತೀಯ ವೈದ್ಯ ಪದ್ಧತಿಗಳಿಗೆ ಸಂಬಂಧಿಸಿದ ಫ್ಯಾಕಲ್ಟಿಗೆ ಡೀನ್ ಆಗಿ ಹುಬ್ಬಳ್ಳಿ ಹಗ್ಗೇರಿಯಲ್ಲಿರುವ ಆಯುರ್ವೇದ ಮಹಾವಿದ್ಯಾಲಯ ಆಸ್ಪತ್ರೆಗೆ ಪ್ರಾಚಾರ್ಯ ಡಾ| ಪ್ರಶಾಂತ ಎ.ಎಸ್. ಆಯ್ಕೆಯಾಗಿದ್ದಾರೆ. ಭಾರತೀಯ ವೈದ್ಯಪದ್ಧತಿಗಳ ಶಿಕ್ಷಣ ವ್ಯಾಪ್ತಿಯಲ್ಲಿ ಕರ್ನಾಟಕದಲ್ಲಿ 85 ಆಯುರ್ವೇದ ಮೆಡಿಕಲ್ ಕಾಲೇಜುಗಳು, 4 ಯುನಾನಿ ವೈದ್ಯಕೀಯ ಕಾಲೇಜುಗಳು ಹಾಗೂ ನ್ಯಾಚುರೋಪತಿ ಯೋಗ ವೈದ್ಯಕೀಯ ಮಹಾವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿವೆ. ಇವರು ಮೂಲತಃ ಕಾಸರಗೋಡಿನ ಅಡೂರಿನವರಾಗಿದ್ದು ಜಾನಪದ, ಯಕ್ಷಗಾನ ಕಲಾವಿದ ಡಿ. ಶ್ರೀಧರ ರಾವ್‌ರ ಪುತ್ರರಾಗಿದ್ದಾರೆ

## ರಾಜ್ಯಮಟ್ಟದ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ





ಶ್ರೀಮತಿ ಅರುಣಾ ಶಿವರಾಮ ರಾವ್ ಇವರು ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ ಬಂಟ್ವಾಳ ವಲಯ (ರಿ) ವಿಟ್ಲ ಇದರ ಸಕ್ರಿಯ ಸದಸ್ಯರಾಗಿ, ಭಜನಾ ತಂಡದ ನಿರ್ದೇಶಕರಾಗಿ ತನ್ನನ್ನು ತಾನು ತೊಡಗಿಸಿಕೊಂಡಿದ್ದು, ರಾಜ್ಯಮಟ್ಟದ ಅಂಗನವಾಡಿಯ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿಯನ್ನು ಪಡೆಯುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ.

## 'ಸ್ಥಾನಿಕ ಸಾಹಿತಿ ಮಾಹಿತಿ ಸಿಂಧು'

### ಪುಸ್ತಕಕ್ಕಾಗಿ ನಮ್ಮ ಸಮಾಜದ ಸಾಹಿತಿಗಳ ಮಾಹಿತಿ ನೀಡಿ

ನಮ್ಮ ಸಮಾಜದ ಸಾಹಿತಿಗಳ ಪರಿಚಯಾತ್ಮಕ ಪುಸ್ತಕವನ್ನು ನನ್ನ ಸಂಶೋಧನೆಯ ಭಾಗವಾಗಿ ಪುಸ್ತಕ ರೂಪದಲ್ಲಿ ಪ್ರಕಟಿಸಲು ಬಯಸಿದ್ದು, ಈ ನಿಟ್ಟಿನಲ್ಲಿ ನಮ್ಮ ಸಮಾಜದ ಸಾಹಿತಿಗಳು ತಮ್ಮ ಪರಿಚಯವನ್ನು ಈ ಕೆಳಗೆ ನೀಡಿರುವ ನಮೂನೆಯಲ್ಲಿ, ತಮ್ಮ ಪಾಸ್ಪೋರ್ಟ್ ಸೈಜ್ ನ ಭಾವಚಿತ್ರದೊಂದಿಗೆ ನೀಡಬೇಕಾಗಿ ವಿನಂತಿ. ಅಂತೆಯೇ ನಿಮ್ಮ ಕುಟುಂಬ ಮತ್ತು ಬಂಧುವರ್ಗದಲ್ಲಿರುವ ಸಾಹಿತಿಗಳಿಗೂ ಈ ಮಾಹಿತಿ ನೀಡಿ ಈಗಾಗಲೇ ನಮ್ಮನ್ನಗಲಿರುವ ನಮ್ಮ ಸಮಾಜದ ಹಿರಿಯ ಸಾಹಿತಿಗಳ ಮಾಹಿತಿ ಕಲೆ ಹಾಕಿ ಈ ಕಾರ್ಯಕ್ರಮದಲ್ಲಿ ಕೈಜೋಡಿಸಬೇಕಾಗಿ ಸಮಾಜ ಬಾಂಧವರಲ್ಲಿ ಪ್ರಾರ್ಥನೆ.

**ನೀಡಬೇಕಾದ ವಿವರಗಳು**

**ಹೆಸರು :**
**ಹುಟ್ಟಿದ ದಿನಾಂಕ :**
**ಊರು :**
**ವಿಳಾಸ :**
**ದೂರವಾಣಿ/ಜಂಗಮವಾಣಿ ಸಂಖ್ಯೆ :**
**ವಿದ್ಯಾರ್ಹತೆ :**
**ಉದ್ಯೋಗ :**
**ಕ್ಷೇತ್ರ ಪರಿಣತಿ :**
**ಸಾಂಸ್ಕೃತಿಕ ಹಿನ್ನಲೆ :**
**ಕೃತಿ/ಕಾವ್ಯಗಳು/ಸಂಪಾದಿತ/ಅನುವಾದಿತ (ಪ್ರಕಟಗೊಂಡ ವರ್ಷದೊಂದಿಗೆ) :**
**ಪ್ರಶಸ್ತಿ/ಗೌರವ/ಮನ್ನಣೆಗಳು :**
**ಇತರೆ**

**ಈ ಎಲ್ಲಾ ವಿವರಗಳನ್ನು ತಾವು ನನ್ನ ವಿಳಾಸ**
**ಅಪೂರ್ವ ರಾವ್,**
ಗ್ರೌಂಡ್ ಫ್ಲೋರ್, ನಂ. 62, ಚಿನ್ಮಯಿ, ಶ್ರೀರಂಗನಗರ 1 ನೇ ಅಡ್ಡ ರಸ್ತೆ,
ಬೆಂಗಳೂರು–560085ಕ್ಕೆ ಅಂಚೆ ಮೂಲಕ ಕಳುಹಿಸಬಹುದು.
ಅಥವಾ ನಿಮ್ಮ ವಿವರಗಳ ವರ್ಡ್ ಫೈಲ್/ಪಿ.ಡಿ.ಎಫ್ ಅನ್ನು
(ಭಾವಚಿತ್ರದೊಂದಿಗೆ) ನನ್ನ ಮಿಂಚಂಚೆ rao.apoorva258@gmail.com ಗೆ ಅಥವಾ
ನನ್ನ ವಾಟ್ಸಪ್ ಸಂಖ್ಯೆ 9483399393 ಕಳುಹಿಸಿಕೊಡಬೇಕಾಗಿ ವಿನಂತಿ.
**ಕೊನೆಯ ದಿನಾಂಕ : 25.04.2022**

## ರಕ್ತದಾನ ಶಿಬಿರ




ಫೆಬ್ರವರಿ 5 ರಂದು ಶನಿವಾರ ಉಡುಪಿಯ ಉಪೇಂದ್ರ ಪೈ ಮೆಮೋರಿಯಲ್ ಕಾಲೇಜು ಮತ್ತು ಮಣಿಪಾಲ ಆಸ್ಪತ್ರೆಯವರ ಸಂಯೋಗದೊಂದಿಗೆ ಫ್ರೆಂಡ್ಸ್ ಗ್ರೂಪ್ ಉಡುಪಿ ಆಯೋಜಿಸಿರುವ ರಕ್ತದಾನ ಶಿಬಿರವನ್ನು ಫ್ರೆಂಡ್ಸ್ ಗ್ರೂಪ್ ಉಡುಪಿಯ ಗೌರವಾಧ್ಯಕ್ಷರಾದ ಶ್ರೀ ವಸಂತರಾವ್ ಕರಂಬಳ್ಳಿಯವರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಫ್ರೆಂಡ್ಸ್ ಗ್ರೂಪ್ ಉಡುಪಿಯವರು ಸತತ 12 ವರ್ಷಗಳಿಂದ ರಕ್ತದಾನ ಶಿಬಿರವನ್ನು ಆಯೋಜಿಸುತ್ತಾ ಬಂದಿದ್ದು ಈ ಮೂಲಕ ಜನಸೇವೆಯನ್ನು ಮಾಡುತ್ತಾ ಬಂದಿದ್ದಾರೆ. ಇದು ಈ ರೀತಿಯೇ ಮುಂದುವರಿಯಲಿ ಎಂಬುದೇ ನಮ್ಮೆಲ್ಲರ ಹಾರೈಕೆ.

**–ಎನ್ ಪ್ರವೀಣ್ ಕುಮಾರ್ ರಾವ್**

## ಶಿಶಿರ್ ಪಿ. ರಾವ್‌ಗೆ ಪಿ.ಎಚ್.ಡಿ. ಪದವಿ ಪ್ರಧಾನ




ಬೆಂಗಳೂರಿನ ಮಲ್ಲೇಶ್ವರದಲ್ಲಿ ನೆಲೆಸಿರುವ ಎಮ್. ಎಸ್. ರಾಮಯ್ಯ ಇಂಜಿನೀಯರಿಂಗ್ ಕಾಲೇಜಿನ ನಿವೃತ್ತ ಪ್ರೊಫೆಸರ್ ಕಟಪಾಡಿ ಮಟ್ಟುವಿನ ಡಾ. ಪರಮಾತ್ಮ ರಾವ್ ಮತ್ತು ಶ್ರೀಮತಿ ಮಂಜುಳಾ ಪಿ. ರಾವ್( ಕಟಪಾಡಿಯಲ್ಲಿ ಆಯುರ್ವೇದ ವೈದ್ಯರಾಗಿದ್ದ ದಿ. ಕೆ. ನಾರಾಯಣ ಶಾಸ್ತ್ರೀ ಇವರ ಪುತ್ರಿ) ದಂಪತಿಗಳ ಪುತ್ರ ಶ್ರೀ ಶಿಶಿರ್ ಪಿ. ರಾವ್ ಇವರು Tufts University, Medford, Massachusetts ಇಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿದ್ದು, ಇಮೇಜ್ ಪ್ರೊಸೆಸಿಂಗ್ ಕ್ಷೇತ್ರದಲ್ಲಿ "Hypercomplex Artificial Intelligence Platform For Image Analytics" ಎಂಬ ವಿಷಯದಲ್ಲಿ ಸಮರ್ಥವಾಗಿ ಪ್ರಬಂಧವನ್ನು ಮಂಡಿಸಿ ಪಿ.ಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಅಲ್ಲದೇ ಅದೇ ಯುನಿವರ್ಸಿಟಿಯ ಇಲೆಕ್ಟ್ರಿಕಲ್ ಮತ್ತು ಕಂಪ್ಯೂಟರ್ ಇಂಜಿನೀಯರಿಂಗ್ ವಿಭಾಗದಲ್ಲಿ ರಿಸರ್ಚ್ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ನಿಯೋಜಿತರಾಗಿದ್ದಾರೆ. ಇದು ನಮ್ಮ ಸಮಾಜಕ್ಕೆ ಹೆಮ್ಮೆಯ ವಿಷಯವಾಗಿದೆ.



ವಾಸ್ತು ಶಾಸ್ತ್ರ ಮತ್ತು ಜ್ಯೋತಿಷ್ಯ ಈ ಪುಸ್ತಕವು ಸದ್ಯದಲ್ಲಿ 2ನೇ ಪ್ರತಿ ಬಿಡುಗಡೆ ಆಗುತ್ತಿದೆ. ಇದು ಪ್ರತಿ ಮನೆಯಲ್ಲಿ ಇರಲೇಬೇಕಾದ ಪುಸ್ತಕ. ಪಡೆಯಲಿಚ್ಛಿಸುವವರು ಶ್ರೀ ಕೆ.ವಿ.ರಾವ್, ಜ್ಯೋತಿಷ್ಯರು ಶ್ರೀದೇವಿ ಪ್ರಸಾದ್ ಜ್ಯೋತಿಷ್ಯಾಲಯ ಪಲಿಮಾರು, ಉಡುಪಿ–574112 ಮೊ. : 7829733490, 9845905290 ಇವರನ್ನು ಸಂಪರ್ಕಿಸಬಹುದು.


Ph : 98459 92859
**Ganesh Hebbar & Associates**
CHARTERED ACCOUNTANT
S.M.S.P. Complex, Udupi - 576 101.

*With Best Complimemts From*
**SRI M. SHAILESH RAO** Ph : 9448624324
B.E., Civil
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
**ಯೆಶಸ್ವೀ ಎಂಟರ್‌ಪ್ರೈಸೆಸ್**
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ – 574 116.
ಇ–ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

## ನಿಧನ



ಶ್ರೀ ಹೊಸಕೋಟೆ ಹಿರಿಯಣ್ಣ ರಾವ್ (86 ವರ್ಷ) ನಿವೃತ್ತ ಅಧ್ಯಾಪಕರು, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ ಇವರು ತಾ.21.02.2022 ರಂದು ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಒಬ್ಬ ಪುತ್ರಿ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

**** ****



ದಿವಂಗತ ಶ್ರೀ ಉದ್ಯಾವರ ಅನಂತಕೃಷ್ಣ ರಾವ್ ಅವರ ಪತ್ನಿ, ದಿವಂಗತ ಪ್ರಫುಲ್ಲಚಂದ್ರ ರಾವ್‌ರವರ ತಾಯಿ ಶ್ರೀಮತಿ ವಸಂತಿ (86 ವರ್ಷ) ಇವರು ತಮ್ಮ ಸ್ವಗೃಹದಲ್ಲಿ ತಾ.20.02.2022ರಂದು ನಿಧನರಾದರು. ಮೃತರು ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

**** ****



ನಿವೃತ್ತ ಕಮರ್ಷಿಯಲ್ ಟ್ಯಾಕ್ಸ್ ಅಧಿಕಾರಿ ಶ್ರೀ ರಮಾಕಾಂತ್ ಎಸ್. ಶ್ಯಾನುಭಾಗ್, ಕುಮಟಾ (73 ವರ್ಷ) ಇವರು ತಾ.13.02.2022 ರಂದು ಉಡುಪಿಯಲ್ಲಿ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

**** ****



ಶ್ರೀ ತಂತ್ರಾಡಿ ಶಿವಾನಂದ ಶಾನುಭೋಗ್ (84 ವರ್ಷ) ಇವರು ತಾ.22.02.2022ರಂದು ತಂತ್ರಾಡಿ, ಮಂದಾರ್ತಿಯಲ್ಲಿ ನಿಧನರಾದರು. ಇವರು ಬೀದರ್‌ನ ಲಿಪ್ಟನ್ ಇಂಡಿಯಾ ಲಿಮಿಟೆಡ್ ಕೆಲಸದಲ್ಲಿದ್ದು ನಿವೃತ್ತರಾಗಿದ್ದರು. ಮೃತರು ಪತ್ನಿ, ಮೂವರು ಪುತ್ರರು, ಒಬ್ಬ ಪುತ್ರಿ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

**** ****




ಕಟಪಾಡಿ ಮೂಡಬೆಟ್ಟು ಹರೀಶ್ಚಂದ್ರ ರಾವ್ ಇವರ ಧರ್ಮಪತ್ನಿ ಶ್ರೀಮತಿ ಕೆ.ಗಿರಿಜಾ ರಾವ್ (70 ವರ್ಷ) ಇವರು ತಾ.01.03.2022ರಂದು ನಿಧನರಾದರು. ಮೃತರು ಪತಿ, ಮೂವರು ಪುತ್ರರು, ಒಬ್ಬ ಪುತ್ರಿ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

**** ****



ಶ್ರೀ ಬೆಳುವೆ ಶಿವರಾಮ ಹೆಬ್ಬಾರ್ (79 ವರ್ಷ) ಇವರು ತಾ.28.02.2022ರಂದು ಶಿವಮೊಗ್ಗದಲ್ಲಿ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

**** ****



ಶ್ರೀ ತೆಂಕಿಲ ಆರ್.ರಾಮಕೃಷ್ಣ ರಾವ್ (90 ವರ್ಷ) ಇವರು ತಾ.02.03.2022ರಂದು ಬೆಂಗಳೂರಿನಲ್ಲಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

**** ****

ಉಡುಪಿಯ ವಳಕಾಡಿನ ಶ್ರೀ ನಂದಳಿಕೆ ಗೋಪಾಲಕೃಷ್ಣ ರಾವ್ (77 ವರ್ಷ) ಇವರು ತಾ.18.02.2022ರಂದು ಮಂಗಳೂರಿನಲ್ಲಿ ನಿಧನರಾದರು. ಮೃತರು ಸಹೋದರ, ಸಹೋದರಿ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.


## ಬ್ರಹ್ಮೋಪದೇಶ

### ಚಿ। ಅನೀಶ್ ಶಾನುಭೋಗ್

ಶ್ರೀಮತಿ ಪೂಜಿತಾ ಮತ್ತು ಶ್ರೀ ನಾಗೇಶ ಪ್ರಸಾದ ದಂಪತಿಯ ಪುತ್ರ **ಚಿ। ಅನೀಶ್ ಶಾನುಭೋಗ್**‌ನ ಬ್ರಹ್ಮೋಪದೇಶವು ತಾ.13.02.2022ರಂದು ಉಡುಪಿ ಕುಂಜಿಬೆಟ್ಟು "ಶ್ರೀ ಶಾರದಾ ಕಲ್ಯಾಣ ಮಂಟಪ"ದಲ್ಲಿ ಜರಗಿತು.


ಕಾರ್ಕಳದಲ್ಲಿ ಪ್ರಥಮ
ತಾಜಾ ಹಾಗೂ ಉತ್ತಮ ಗುಣ ಮಟ್ಟದ ಎಲ್ಲಾ ರೀತಿಯ ಹಿಟ್ಟು ಒಂದೇ ಜಾಗದಲ್ಲಿ ಲಭ್ಯ.
ನಮ್ಮಲ್ಲಿ ಗೋಧಿ, ಜೋಳ, ಅಕ್ಕಿ, ರಾಗಿ ಹಿಟ್ಟು ಹಾಗೂ ಅಕ್ಕಿ ರವ ದೊರೆಯುತ್ತದೆ.
ಪ್ರಕೃತಿ ಸ್ಟೋರ್ಸ್
PFM
ಪ್ರಸಾದ್ ಭವನ (ವಿ. ಕೆ. ಡೆಕೋರೇಟರ್ಸ್ ಬಳಿ)
ಹೋಟೇಲ್ ಮಹಾಲಸಾ ಎದುರು, ತೆಳ್ಳಾರು ರಸ್ತೆ, ಕಾರ್ಕಳ
For The First Time We Are Introducing Fresh And Good Quality Of Rice, Ragi, Jowar & Wheat Flour Along With Rice Rava In Single Venue

Contact: Prakrithi Stores, Prasad Bhavana (Near: V. K. Decoratores), Opp: Hotel Mahalasa, Tellar Road, Karkala. Mob: 8296375933


ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655

Buying and selling shares as easy as checking your emails
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013. Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)


# ಹರಿದಾಸ ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯರವರ ವ್ಯಕ್ತಿ ಪರಿಚಯ

(ಕಳೆದ ಸಂಚಿಕೆಯಿಂದ ಮುಂದುವರಿದುದು)



–ಡಾ.ಬಿ ಜನಾರ್ದನ ಭಟ್

ಮರಬಿದ್ದು ಮನೆ ಕಳಕೊಂಡ ಹರಿದಾಸರಿಗೆ ಪಾವಂಜೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಆಶ್ರಯ ನೀಡಲಾಯಿತು. ದೇವಸ್ಥಾನ ಸ್ಥಾಪಕರಾದ ವಾಸು ಭಟ್ಟರು ಮನೆಯಿಲ್ಲದ ಹರಿದಾಸರಿಗೆ ದೇವಸ್ಥಾನದ ಮುಂಭಾಗದ ಪೌಳಿಯ ಈಶಾನ್ಯ ಮೂಲೆಯ ಕೋಣೆಯಲ್ಲಿ ವಾಸಿಸಲು ವ್ಯವಸ್ಥೆ ಮಾಡಿಕೊಟ್ಟರು. (2005ರಲ್ಲಿ ದೇವಸ್ಥಾನ ಪುನರುಜ್ಜೀವನಗೊಳ್ಳುವವರೆಗೂ ಅದು 'ಹರಿದಾಸರ ಕೋಣೆ' ಎಂದೇ ಕರೆಯಲ್ಪಡುತ್ತಿತ್ತಂತೆ). ಅಲ್ಲಿದ್ದ ದೊಡ್ಡ ಗಾತ್ರದ ಮರದ ಕೆಲೆಂಬಿಯೊಳಗೆ (ಮಂಚದ ಗಾತ್ರದ ಪೆಟ್ಟಿಗೆ– ಅದರ ಮೇಲೆ ಮಲಗಲೂ ಆಗುತ್ತದೆ) ಒಂದು ಕಬ್ಬಿಣದ ಪೆಟ್ಟಿಗೆಯಲ್ಲಿ ಹರಿದಾಸರು ತಮ್ಮ ತಿರುಗಾಟದಲ್ಲಿ ಸಂಗ್ರಹಿಸಿದ ಹಣವನ್ನು ಭದ್ರವಾಗಿ ಇಡುತ್ತಿದ್ದರು. ಒಂದು ದಿನ ಹೀಗೆ ಸಂಗ್ರಹಿಸಿದ ಹಣ ಕಾಣೆಯಾದಾಗ ಅದನ್ನು ಕಬಳಿಸಿದ ಕಳ್ಳರು ತನ್ನ ಆತ್ಮೀಯರೆಂದೇ ನಟಿಸಿಕೊಂಡಿದ್ದ ಆರುಮಂದಿ ಬಂಧುಗಳೇ ಎಂದು ತಿಳಿದಾಗ ಹರಿದಾಸರು ಅವರ ಮೇಲೆ ಕೋಪಿಸಿಕೊಳ್ಳದೆ, ಆ ಆರು ಜನರನ್ನು ಅರಿಷಡ್ವರ್ಗಗಳೆಂದು ಭಾವಿಸಿ ತನ್ನ ಹಿಡಿತವಿಲ್ಲದ ಪಂಚೇಂದ್ರಿಯಗಳು ತನ್ನನ್ನು ವಂಚಿಸಿ ಶಿಕ್ಷಿಸಿದವೋ ಎಂದು ಭಾವಿಸಿ ಒಂದು ಕೀರ್ತನೆಯನ್ನು ರಚಿಸಿ ಹಾಡಿದರು!

*ಎಷ್ಟೋ ಅಪರಾದಿ । ಯಾವುದು ।*
*ಬಟ್ಟೆಯೋ ಕರುಣಾಬ್ಧಿ ॥ ॥ ಪಲ್ಲ ॥*
*ದುಷ್ಟರಾರುಜನ । ಒಟ್ಟುಗೂಡಿ ಎನ್ನ ।*
*ಮೆಟ್ಟಿ ಕುಟ್ಟಿ ಪುಡಿ । ಗಟ್ಟುವರೈ ಹರಿ ॥ ॥ಅನು॥*
*ಲೇಶ ಪುಣ್ಯವಿಲ್ಲ । ಪಾಪದ ।*
*ರಾಶಿ ಬೆಳೆಯಿತಲ್ಲ ॥*
*ಆಶಾವಶ ಹರಿ । ದಾಸನೆಂದೆನಿಸಿದೆ ।*
*ದೂಷಣ ಜನರ ಶ । ಬಾಸಿಗೆ ಮೆಚ್ಚಿದೆ ॥ ॥೧॥*
*ಕಲಿಕಲ್ಮಷ ಬಹಳ । ದೇಹದಿ ।*
*ನೆಲೆಸಿತು ಶ್ರೀಲೋಲ ॥*
*ಜಲಜನಾಭ ನಿ । ನ್ನೊಲುಮೆಯೆ ಮುಖ್ಯವು ।*
*ಕುಲಕೆಟ್ಟ ಅಜ । ಮಿಳ ಪಾವನನಾದ ॥ ॥ ೨ ॥*
*ಹೀನರ್ಮ್ಯವರ ಸಂಗ । ದಿಂದಲೆ ।*
*ಹಾನಿಯಾದೆನೊ ರಂಗ ॥*
*ಪ್ರಾಣವು ನಿನ್ನಾ । ಧೀನವಾದ ಮೇಲೆ ।*
*ನೀನೆ ಗತಿ ಲ । ಕ್ಷ್ಮೀನಾರಾಯಣ ॥ ॥ ೩ ॥*

1922 ರಲ್ಲಿ ತಮ್ಮ ಸಕಲ ಸ್ಥಿರ ಚರ ಆಸಿಗಳನ್ನು ದೇವಾಲಯಕ್ಕೆ ಬರೆದುಕೊಟ್ಟ ಹರಿದಾಸರು 1924ರಲ್ಲಿ ವೈಕುಂಠವಾಸಿಗಳಾದರು.

**ಹರಿಕಥಾ ಕಥನಕುತೂಹಲ**

ಪಾವಂಜೆ ಹರಿದಾಸರ ಹರಿಕಥೆಯ ಶೈಲಿ, ಅದರ ಸ್ವಾರಸ್ಯಗಳ ಬಗ್ಗೆ ಡಾ. ಎಚ್. ದಿವಾಕರ ಭಟ್ ಯಾಜಿ ಅವರು ದಾಖಲಿಸಿರುವುದು ಹೀಗೆ: ಪಾವಂಜೆ ಹರಿದಾಸ ಲಕ್ಷ್ಮೀನಾರ್ಣಪ್ಪಯ್ಯನವರು ಆಜಾನುಬಾಹು ಏನೂ ಅಲ್ಲ. ಮಧ್ಯಮ ಗಾತ್ರದ ಎಣ್ಣೆ ಕಪ್ಪು, ಬಣ್ಣದ ದುಂಡು ಮುಖದ, ದಪ್ಪ ಮೀಸೆ, ಗಂಭೀರ ಮುಖಭಾವದವರಾಗಿದ್ದರು. ಅವರು ಹರಿಕಥೆಗೆ ನಿಂತಾಗ ಮೈಸೂರು ರಾಜರ ಪೇಟದಂತಹ ಜರಿ ಪಟ್ಟೆಯ ಮುಂಡಾಸು ಧರಿಸುತ್ತಿದ್ದರು. ಆ ರೀತಿ ಅದನ್ನು ಸುತ್ತಿ ಕಟ್ಟಲು ಅವರಿಗೆ ಮಾತ್ರ ಗೊತ್ತಿತ್ತು. ಕೆಲವು ಸಂದರ್ಭಗಳಲ್ಲಿ ಕಪ್ಪನೆಯ ಕೋಟನ್ನು ತೊಡುತ್ತಿದ್ದುದುಂಟು. ಶುಭ್ರ ಬಿಳಿ ಪಂಚೆಯ ಕಚ್ಚೆಯನ್ನು ಬಿಗಿದು ಅವರು ಹರಿಕಥೆಗೆ ನಿಂತರೆಂದರೆ ಸಭೆ ಸ್ತಬ್ಧವಾಗುತ್ತಿತ್ತು. ಅವರ ಹರಿಕಥೆಗಳು ಭಕ್ತಿ ಪ್ರಧಾನವಾದುವುಗಳು. ಯಾವುದೇ ಕಥೆಯಿರಲಿ, ಪೀಠಿಕೆಯು ಅಡಿಗಲ್ಲು ಅದಕ್ಕನುಣವಾಗುತ್ತಿತ್ತು.

(ಮುಂದುವರಿಯುವುದು)

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ
ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ
ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ
ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-30ರಿಂದ

**ತಾ.21-03-2022 ಮತ್ತು ತಾ.19-04-2022 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.25-03-2022 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.23-03-2022 ಮತ್ತು ತಾ.06-04-2022 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಮೀನ ಮಾಸದ ವಿಶೇಷ ದಿನಗಳು

| | | | |
|---|---|---|---|
| 14-03-2022 | ಮೀನ ಸಂಕ್ರಮಣ, ಸರ್ವೈಕಾದಶಿ ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾವರ್ಧಂತಿ | 02-04-2022 | ವಸಂತಋತು ಚೈತ್ರ ಮಾಸದ ಶುಕ್ಲಪಕ್ಷಾರಂಭ, ಶುಭಕೃತು ಸಂವತ್ಸರ ಆರಂಭ (ಚಾಂದ್ರಮಾನ) ಚಾಂದ್ರ ಯುಗಾದಿ |
| 17-03-2022 | ಹೋಲಿಕಾ ಕಾಮದಹನ | 12-04-2022 | ಸ್ಮಾರ್ತೈಕಾದಶಿ |
| 18-03-2022 | ಹೋಲಿ ಹುಣ್ಣಿಮೆ | 13-04-2022 | ಭಾಗವತ, ವೈಷ್ಣವೈಕಾದಶಿ |
| 19-03-2022 | ಶಿಶಿರ ಋತು ಫಾಲ್ಗುಣ ಮಾಸದ ಕೃಷ್ಣ ಪಕ್ಷಾರಂಭ | 14-04-2022 | ಮೇಷ ಸಂಕ್ರಮಣ |
| 21-03-2022 | ಸಂಕಷ್ಟಹರ ಚತುರ್ಥಿ, ಚಂದ್ರೋದಯ ರಾತ್ರಿ 9.36 | 15-04-2022 | ಸೌರಯುಗಾದಿ, ಶುಭಕೃತು ಸಂವತ್ಸರ ಆರಂಭ (ಸೌರಮಾನ) |
| 28-03-2022 | ಸರ್ವೈಕಾದಶಿ | 16-04-2022 | ಹುಣ್ಣಿಮೆ |
| 01-04-2022 | ಅಮಾವಾಸ್ಯೆ, ಪ್ಲವ ಸಂವತ್ಸರ ಮುಕ್ತಾಯ | 17-04-2022 | ವಸಂತಋತು ಚೈತ್ರ ಮಾಸದ ಕೃಷ್ಣಪಕ್ಷಾರಂಭ |
| | | 19-04-2022 | ಸಂಕಷ್ಟಹರ ಚತುರ್ಥಿ, ಚಂದ್ರೋದಯ ರಾತ್ರಿ 9.27 |



RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

## ಶ್ರೀ ಪ್ರಭಾಕರ ರಾವ್, ನಾರಾವಿ–ವಿರಚಿತ "ರವಿಭಕ್ತಿಸಾರ" ಕೃತಿಯ ಬಿಡುಗಡೆ ಸಮಾರಂಭ



ದಿನಾಂಕ 20.02.2022ರಂದು ನಾರಾವಿಯ ಶ್ರೀ ಸೂರ್ಯನಾರಾಯಣ ದೇವಸ್ಥಾನದ ವಾರ್ಷಿಕ ಜಾತ್ರೆಯ ಶುಭ ಸಂದರ್ಭದಲ್ಲಿ ಖ್ಯಾತ ಜ್ಯೋತಿಷಿಗಳು, ಕೃಷಿಕರೂ, ನಾಟಿವೈದ್ಯರೂ ಆಗಿ ತನ್ನ ಜೀವನದುದ್ದಕ್ಕೂ ಜನಸೇವೆಗೈದ ಕೀರ್ತಿಶೇಷ ಶ್ರೀ ಪ್ರಭಾಕರ ರಾವ್, ನಾರಾವಿ ಇವರು ನಾರಾವಿ ಶ್ರೀ ಸೂರ್ಯನಾರಾಯಣ ದೇವರ ಬಗ್ಗೆ ಭಾಮಿನೀ ಷಟ್ಪದಿಯಲ್ಲಿ ಭಾವಾರ್ಥ ಸಹಿತ ಬರೆದ 108 ಶ್ಲೋಕಗಳ ಸ್ತುತಿಗೀತೆಗಳ ಬಿಡುಗಡೆ ಸಮಾರಂಭವು ಜರುಗಿತು.

ಕ್ಷೇತ್ರದ ಪ್ರಧಾನ ತಂತ್ರಿಗಳಾದ ವೇದಮೂರ್ತಿಎಡಪದವು ಶ್ರೀ ರಾಧಾಕೃಷ್ಣ ತಂತ್ರಿಯುವರು ಈ ಕೃತಿಯುನ್ನು ಶ್ರೀ ಸೂರ್ಯನಾರಾಯಣ ದೇವರ ಪದ ತಲದಲ್ಲಿ ಇಟ್ಟು ದೇವರಿಗೆ ಸಮರ್ಪಿಸಿ, ಪ್ರಾರ್ಥಿಸಿ ಆಶೀರ್ವದಿಸಿದರು. ಕರ್ನಾಟಕ ಗಮಕ ಕಲಾ ಪರಿಷತ್, ಉಡುಪಿ ಜಿಲ್ಲೆಯ ಜಿಲ್ಲಾಧ್ಯಕ್ಷರೂ ಖ್ಯಾತ ಗಮಕಿಗಳೂ ಆದ ಶ್ರೀ ಸತೀಶ ಕುಮಾರ್ ಕೆಮ್ಮಣ್ಣು ಇವರು ಪುಸ್ತಕ ಬಿಡುಗಡೆಗೊಳಿಸಿದರು. ದೇವಸ್ಥಾನದ ಆಡಳಿತ ಮೊಕ್ತೇಸರರಾದ ಶ್ರೀ ನಿರಂಜನ ಅಜ್ರಿಯುವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಪತ್ರಕರ್ತರಾದ ಶ್ರೀ ಪದ್ಮಾಕರಭಟ್ ಇವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಜನಪ್ರಿಯ ವೈದ್ಯರೂ, ದೇವಸ್ಥಾನದ ಟ್ರಸ್ಟಿಗಳೂ ಆಗಿರುವ ಡಾ| ಪ್ರಸಾದ್ ಶೆಟ್ಟಿ ಮುಖ್ಯ ಅತಿಥಿಗಳಾಗಿದ್ದರು. ಶ್ರೀಮತಿ ತಮಾ ಪ್ರಭಾಕರ ರಾವ್, ಹೊಳೆಹೊದ್ದು ಶ್ರೀ ರತ್ನಾಕರ ರಾವ್ ಉಪಸ್ಥಿತರಿದ್ದರು.

ಶ್ರೀ ಪಿಲಾರು ಸುಧಾಕರ ಶೆಣೈ ಕಾರ್ಯಕ್ರಮ ನಿರೂಪಿಸಿದರು. ಶ್ರೀ ರವಿಶಂಕರ ರಾವ್ ಪ್ರಾರ್ಥನೆ ಗೈದು ಶ್ರೀ ರವಿರಾಮ ರಾವ್ ಸ್ವಾಗತಿಸಿದರು. ಶ್ರೀಮತಿ ಸುಮನಾ ಜಗದೀಶ್ ವಂದಿಸಿದರು. ಶ್ರೀಮತಿ ಪ್ರಸನ್ನಾ ವೆಂಕಟ್ರಾವ್ ಹಾಗೂ ಶ್ರೀಮತಿ ಸೌಜನ್ಯಾ ವಸಂತರಾವ್ ಸಹಕರಿಸಿದರು.

**ವರದಿ : ಶ್ರೀಮತಿ ಸಾವಿತ್ರಿ ಮನೋಹರ್**

## ಜಿಲ್ಲಾ ಮಟ್ಟದ ಸಾಧನಶೀಲಾ ಪ್ರಶಸ್ತಿ



ನಮ್ಮ ಸಮಾಜದ ನಿವೃತ್ತ ಮುಖ್ಯಶಿಕ್ಷಕಿ ಶ್ರೀಮತಿ ಶರಾವತಿ ಯು. ಆರ್. ಎಲ್ಲೂರು ಅವರಿಗೆ ತಾ. 06.03.2022 ರಂದು ಜರಗಿದ ಜಿಲ್ಲಾ ರೈತ ಸಮಾವೇಶದಲ್ಲಿ ಅವರು ಕೃಷಿಯಲ್ಲಿ ಸಾಧಿಸಿದ ಸೇವೆಯುನ್ನು ಗಮನಿಸಿ ಗಣ್ಯರ ಸಮ್ಮುಖದಲ್ಲಿ ಜಿಲ್ಲಾ ಮಟ್ಟದ ಸಾಧನಾಶೀಲಾ ಪ್ರಶಸ್ತಿಯುನ್ನು ನೀಡಿ ಪುರಸ್ಕರಿಸಲಾಯಿತು. ಅವರಿಗೆ ಶ್ರೀಶಾರದಾ ಅಭಿನಂದನೆಗಳು.

## ಪುತ್ತೂರಿನ "ಶಿವಸದನ" ದ ವಿಸ್ತೃತ ಕಟ್ಟಡದ ಉದ್ಘಾಟನೆ



ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ "ಶಿವಸದನ"ದ ದ್ವಿತೀಯ ಅಂತಸ್ತಿನ ವಿಸ್ತೃತ ಕಟ್ಟಡದ ಉದ್ಘಾಟನೆ, ದಾನಿಗಳ ಭಾವಚಿತ್ರ ಫಲಕಗಳ ಅನಾವರಣ, ಸಭಾ ಕಾರ್ಯಕ್ರಮ ತಾ 13.02.2022ರ ರವಿವಾರ ನಡೆದಿದ್ದು ಈ ಸಂದರ್ಭದಲ್ಲಿ ಅಲೆವೂರು ದಿವಂಗತ ಶ್ರೀನಿವಾಸ್ ರಾವ್ ಮತ್ತು ರಮಾ ದೇವಿ ಇವರ ಸುಪುತ್ರಿ ಅಮೇರಿಕದಲ್ಲಿ ವಾಸ್ತವ್ಯವಿರುವ ಶ್ರೀಮತಿ ಬಬಿತ ಅಣ್ಣಾಜಿ ರಾವ್ ತಮ್ಮ ಮಾತ ಪಿತರ ಸವಿನೆನಪಿಗಾಗಿ ರೂ.1,00,000 ದೇಣಿಗೆ ನೀಡಿದ್ದು ಚೆಕ್ ನ್ನು ಅವರ ಸಹೋದರಿ ಶ್ರೀಮತಿ ವಲ್ಲಿ ಜ್ಞಾನೇಶ್ ಹಸ್ತಾಂತರಿಸಿದರು. ಶ್ರೀ ಸಭಾದ ಪಧಾಧಿಕಾರಿಗಳು, ಗಣ್ಯರು ಉಪಸ್ಥಿತರಿದ್ದರು. ಮುಂದಕ್ಕೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. "ಶಿವ ಸದನ" ವಸತಿ ನಿಲಯವು ಸಮಾಜ ಬಾಂಧವರ ಸಹಕಾರದಿಂದ ಯಶಸ್ವಿಯಾಗಿ ನಡೆಯುತ್ತಿದ್ದು ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ಹಿರಿಯ ನಾಗರಿಕರ ಸಸ್ಯಹಾರಿ ವಸತಿ ನಿಲಯದಲ್ಲಿ ಈಗಾಗಲೇ 25 ಕ್ಕೂ ಹೆಚ್ಚು ನಿವಾಸಿಗಳಿದ್ದು ಮಿತ ದರದಲ್ಲಿ ಎಲ್ಲಾ ಸಸ್ಯಾಹಾರಿಗಳಿಗೆ ಮುಕ್ತವಾಗಿರುತ್ತದೆ. ಅಪೇಕ್ಷಿತರಿಗೆ ಮಾಹಿತಿ ನೀಡಿ ಸಹಕರಿಸಿ.


ಸಂಪರ್ಕಿಸಿ:ಶ್ರೀ ಕರುಣ್ ರಾವ್ ಬೆಳ್ಳೆ ಮೊ:7337634359, ಪಿ.ಶ್ರೀಕಾಂತ್ ರಾವ್ ಮೊ:7795116598

## ಶ್ರೀ ಶಂಕರ ಪ್ರತಿಷ್ಠಾನ(ರಿ.) ಕಾರ್ಕಳ : ಮಹಾಶಿವರಾತ್ರಿ ಪೂಜೆ

ಶ್ರೀ ಶಂಕರ ಪ್ರತಿಷ್ಠಾನ(ರಿ.) ಪ್ರಸಾದ ಭವನ ಕಾರ್ಕಳ ಇದರ ವತಿಯಿಂದ 01.03.2022ರಂದು ಮಹಾಶಿವರಾತ್ರಿ ಪೂಜೆಯು ಸಂಘದ ಅಧ್ಯಕ್ಷರಾದ ಮಾನ್ಯ ಕೇಶವ ರಾವ್ ಇವರ ನೇತೃತ್ವದಲ್ಲಿ ನೆರವೇರಿತು. ಶಿವಪೂಜೆಯನ್ನು ಕ್ಷೀರ, ತುಪ್ಪ, ಸಕ್ಕರೆ, ಮೊಸರು ಮೊದಲಾದ ದ್ರವ್ಯಗಳಿಂದ ಅಭಿಷೇಕ ಮಾಡಿ ಬಿಲ್ವಪತ್ರೆ, ನೈವೇದ್ಯವನ್ನು ಅರ್ಪಿಸಿ, ಉಪವಾಸ ವ್ರತ ಮಾಡಿದ ಎಲ್ಲರಿಂದಲೂ ಅರ್ಘ್ಯವನ್ನು ನೀಡುವುದರ ಮೂಲಕ ಕುಲಪುರೋಹಿತರಾದ ಯಾಜಿ ಡಾ.ನಿರಂಜನ ಭಟ್‌ರವರು ನೆರವೇರಿಸಿ ಕೊಟ್ಟರು. ಆಗಮಿಸಿದ ಸಮಾಜಬಾಂಧವರೆಲ್ಲರೂ ಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾದರು. ಶ್ರೀಮತಿ ಸಾವಿತ್ರಿ ಮನೋಹರ ರಾವ್‌ರವರು ಉಪಹಾರದ ಸಂಪೂರ್ಣ ವೆಚ್ಚವನ್ನು ಭರಿಸಿದರು ಹಾಗೂ ಉಪಹಾರದ ಮೇಲುಸ್ತುವಾರಿಯುನ್ನು ಶ್ರೀ ಭವಾನಿಶಂಕರ ದಂಪತಿಗಳು ಮಾಡಿದ್ದರು. ಎಲ್ಲಾ ಸಮಾಜ ಬಾಂಧವ ಭಗವದ್‌ಭಕ್ತರಿಗೆ ದೇವರು, ಸಿರಿ, ಆಯುಷ್ಯ, ಆರೋಗ್ಯ, ಸುಖ ಸೌಭಾಗ್ಯವನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತ ಆಗಮಿಸಿ ಸಹಕರಿಸಿದ ಎಲ್ಲರಿಗೂ ಕಾರ್ಯದರ್ಶಿ ಕೆ.ಹರಿಶ್ಚಂದ್ರ ರಾವ್ ಧನ್ಯವಾದ ಸಮರ್ಪಿದರು.

**ಶ್ರೀ ಶಂಕರ ಪ್ರತಿಷ್ಠಾನ(ರಿ), ಪ್ರಸಾದ ಭವನ, ಕಾರ್ಕಳ**

## ಬ್ರಹ್ಮೋಪದೇಶ



### ಚಿ| ಅನೀಶ್ ಶ್ಯಾನುಭೋಗ್

ತಾ.13.02.2022 ರಂದು ಕುಂಜಿಬೆಟ್ಟು "ಶ್ರೀ ಶಾರದಾ ಮಂಟಪ" ದಲ್ಲಿ
ಶ್ರೀಮತಿ ಪೂಜಿತಾ ಮತ್ತು ಶ್ರೀ ನಾಗೇಶ್ ಪ್ರಸಾದ್‌ರ ಪುತ್ರ
ಚಿ| ಅನೀಶ್ ಶ್ಯಾನುಭೋಗ್‌ನ ಬ್ರಹ್ಮೋಪದೇಶಕ್ಕೆ ಆಗಮಿಸಿ,
ವಟುವನ್ನು ಹರಸಿದ ತಮಗೆಲ್ಲರಿಗೂ ಕೃತಜ್ಞತೆಗಳು

–: ಶುಭ ಕೋರುವ :–

ಶ್ರೀಮತಿ ಶೋಭಾ ಮತ್ತು ಶ್ರೀ ಪಾಂಡುರಂಗ ಶ್ಯಾನುಭೋಗ್, ಕರಂದಾಡಿ
ಹಾಗೂ ಸಹೋದರಿಯರು
ಶ್ರೀಮತಿ ಪ್ರೇಮಲತಾ ಮತ್ತು ಶ್ರೀ ಹರಿನಾರಾಯಣ ರಾವ್, ಕುಂಜಾರು
ಹಾಗೂ ಸಹೋದರರು, ಸಹೋದರಿಯರು

## ನೂತನ ವಧೂವರರಿಗೆ ಅಭಿನಂದನೆಗಳು



### ಚಿ| ಅಮೊಘ ಹಾಗೂ ಚಿ| ಸೌ| ಅಪರ್ಣಾ

ತಾ.10.02.2022ನೇ ಗುರುವಾರ ಪ್ಯಾಲೇಸ್ ಗಾರ್ಡನ್, ಕಾಪು ಇಲ್ಲಿ
ಜರುಗಿದ ವಿವಾಹ ಮಹೋತ್ಸವಕ್ಕೆ ಆಗಮಿಸಿ,
ನೂತನ ವಧೂವರರಿಗೆ ಶುಭ ಹಾರೈಸಿದ ತಮಗೆಲ್ಲರಿಗೂ

–: ಶುಭ ಕೋರುವ :–

ಶ್ರೀಮತಿ ಅನಸೂಯ ಮತ್ತು ಶ್ರೀ ಬೆಳ್ಮಣ್ ಆನಂದ ರಾವ್ ಮತ್ತು ಸಹೋದರ
ಶ್ರೀಮತಿ ಪಾವನಾ ಮತ್ತು ಡಾ| ಅರುಣ್ ಕುಮಾರ್ ಮತ್ತು ಸಹೋದರರು
ಶ್ರೀಮತಿ ಲಲಿತಾ ಮತ್ತು ಶ್ರೀ ವೆಂಕಟ್ರಾವ್, ಆಳುಗ್ಗೇಲ್
ಶ್ರೀಮತಿ ವಿಜಯಲಕ್ಷ್ಮೀ ಮತ್ತು ಶ್ರೀ ಚಂದ್ರಶೇಖರ್
ಶ್ರೀಮತಿ ಗೌರಾಂಭ ಮತ್ತು ಶ್ರೀ ವೆಂಕಟಸುಬ್ಬಯ್ಯ
ಶ್ರೀಮತಿ ಮಮತ ಮತ್ತು ಶ್ರೀ ಮಂಜುನಾಥ್

# ಅಕಾಲಿಕವಾಗಿ ಅಗಲಿದ ಯು. ಪ್ರಪುಲ್ಲಚಂದ್ರರಾಯರಿಗೆ ನುಡಿನಮನ



ದಿನಾಂಕ 15.02.2022ರಂದು ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ಪ್ರಪುಲ್ಲಚಂದ್ರರಾಯರ ವೈಕುಂಠ ಸಮಾರಾಧನೆಯ ಸಂದರ್ಭ ಅವರಿಗೆ ಶ್ರದ್ಧಾಂಜಲಿ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಮೊದಲು ಪ್ರಾಸ್ತಾವಿಕ ಮಾತುಗಳನ್ನಾಡಿದ ಕೃಷ್ಣ ಕುಮಾರ್ ರಾವ್ ಮಟ್ಟು, ಪ್ರಪುಲ್ಲಚಂದ್ರ ರಾಯರು ಮಾಡಿದ್ದ ಸಮಾಜ ಸೇವೆಗಳನ್ನು ಸಭೆಗೆ ತಿಳಿಸಿದರು. ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಇದರ ಯುವ ವಿಭಾಗವನ್ನು ಪ್ರಾರಂಭಿಸಿ, ಸ್ಥಳೀಯ ಯುವಕರನ್ನು ಒಗ್ಗೂಡಿಸುವಿಕೆ, ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟದ ಪ್ರಾರಂಭ, ಶ್ರೀ ಶಾರದಾ ಪತ್ರಿಕೆಯ ಪ್ರಾರಂಭ ಮತ್ತು ಶಾರದಾ ಸೊಸೈಟಿಯ ಸ್ಥಾಪನೆ ಮೊದಲಾದುವುಗಳ ಬಗ್ಗೆ ಅವರ ಕೊಡುಗೆಗಳನ್ನು ನೆನಪಿಸಿಕೊಂಡರು. ಮುಂದೆ ಸಂಘದ ಸದಸ್ಯರಾಗಿ, ನಿರ್ದೇಶಕರಾಗಿ, ಅಧ್ಯಕ್ಷರಾಗಿ ಸಂಘವನ್ನು ಮುನ್ನಡೆಸಿದ ರೀತಿಯನ್ನು ವಿವರಿಸಿದರು. ಜಗದ್ಗುರು ಶೃಂಗೇರಿ ಪೀಠದೊಂದಿಗೆ ಅವರ ನಿಕಟ ಸಂಪರ್ಕ, ಶ್ರೀ ಶಾಂಕರ ತತ್ವ ಪ್ರಸಾರ ಅಭಿಯಾನದ ಉಡುಪಿ ಜಿಲ್ಲಾ ಸಂಚಾಲಕರಾಗಿ ನಿರ್ವಹಿಸಿದ ಕಾರ್ಯಗಳು, ಜ್ಞಾನ ಭಾರತಿ (ರಿ.) ಸಂಸ್ಥೆಯ ಸ್ಥಾಪನೆಗೆ ಪಟ್ಟ ಶ್ರಮ, ಉಡುಪಿ ಜಿಲ್ಲೆಯಲ್ಲಿ ಶ್ರೀ ಶಂಕರ ಮಠ ಸ್ಥಾಪನೆಗೆ ಮಾಡಿದ ಪ್ರಯತ್ನ, ಉಡುಪಿ ಜಿಲ್ಲಾ ಬ್ರಾಹ್ಮಣ ಮಹಾ ಸಭಾಗೆ ಆಶ್ರಯ ನೀಡಿ, ತ್ರಿಮಸ್ಥ ಬ್ರಾಹ್ಮಣರ ಒಗ್ಗೂಡುವಿಕೆಗೆ ಮಾಡಿದ ಕೆಲಸ ಹಾಗೂ ಮುಂದಿನ ದಿನಗಳಲ್ಲಿ ಅವರು ಮಾಡಬೇಕೆಂದಿದ್ದ ಕೆಲವು ಯೋಜನೆಗಳ ಕನಸುಗಳ ಬಗ್ಗೆಯೂ ವಿವರಿಸಿದರು.

ಶೃಂಗೇರಿ ಶ್ರೀ ಶಾರದಾ ಪೀಠದ ಉಡುಪಿ ಪ್ರಾಂತ್ಯದ ಧರ್ಮಾಧಿಕಾರಿ ವೇ.ಬ್ರ.ಶ್ರೀ ವಾಗೀಶ ಶಾಸ್ತ್ರಿಯವರು ಪ್ರಪುಲ್ಲಚಂದ್ರ ರಾಯರು ಮಾಡಿದ ಶ್ರೀ ಮಠದ ಸೇವೆಗಳನ್ನು ನೆನಪಿಸಿಕೊಂಡು ಮುಂದಿನ ದಿನಗಳಲ್ಲಿ ಅಂತಹ ಕೆಲಸಗಳನ್ನು ಮುಂದುವರಿಸುವವರು ಯಾರು? ಎಂದು ಖೇದ ವ್ಯಕ್ತಪಡಿಸಿದರು.

ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ವತಿಯಿಂದ ಉಪಾಧ್ಯಕ್ಷ ಅರವಿಂದ್ ಕುಮಾರ್, ಮಂಗಳೂರಿನಿಂದ ಕರುಣ್ ರಾವ್ ಬೆಳ್ಳೆ, ಪಡುಬಿದ್ರೆಯಿಂದ ದಿವಾಕರ್ ರಾವ್ ಯಂ.ಕೆ, ಸ್ಥಾನಿಕ ಬ್ರಾಹ್ಮಣ ಮಹಾಮಂಡಲದಿಂದ ಅಧ್ಯಕ್ಷ ದೇವಾನಂದ ಭಟ್, ಬ್ರಹ್ಮಾವರ-ಬಾರ್ಕೂರು ಸಂಘದ ವತಿಯಿಂದ ಮಂಜುನಾಥಯ್ಯ, ಜಿಲ್ಲಾ ಬ್ರಾಹ್ಮಣ ಸಂಘದ ಉಪಾಧ್ಯಕ್ಷ ಗಣೇಶ್ ರಾವ್ ಕುಂಭಾಶಿ, ಸುರತ್ಕಲ್‌ನಿಂದ ಮಾಧವರಾವ್, ಶಂಕರ ತತ್ವ ಪ್ರಸಾರ ಅಭಿಯಾನದ ರವೀಂದ್ರ ಹೆಬ್ಬಾರ್, ಶ್ರೀ ಕ್ಷೇತ್ರ ಪಾವಂಜೆಯ ಧರ್ಮದರ್ಶಿ ಯಾಜಿ ಎಚ್ ನಿರಂಜನ್ ಭಟ್, ಅಡೂರು ಸುಬ್ರಾಯ ಭಟ್, ಪದ್ಮನಾಭ ಮೇರ್ಟ ಮೊದಲಾದವರು ಪ್ರಪುಲ್ಲಚಂದ್ರರಾಯರಿಗೆ ನುಡಿನಮನ ಸಲ್ಲಿಸಿದರು.

ಉಡುಪಿಯ ಯಕ್ಷಗಾನ ಕಲಾರಂಗದ ಕಾರ್ಯದರ್ಶಿ ಮುರಳೀ ಕಡೆಕಾರ್, ಉಡುಪಿಯ ಉದ್ಯಮಿ ವಿಶ್ವನಾಥ ಶೆಣೈ, ಶ್ರೀಮತಿ ಸಂಧ್ಯಾ ವಾಸುದೇವರಾವ್, ಕು| ಅಂಬಿಕಾ ರಾಣಿ, ಮೊದಲಾದವರು ಪ್ರಪುಲ್ಲಚಂದ್ರರಾಯರ ಸಾಮಾಜಿಕ ಕಾಳಜಿಯನ್ನು ಕೊಂಡಾಡಿದರು.

ಅವರ ಬಂಧುಗಳ ಪರವಾಗಿ ಅಡೂರು ಭಾಸ್ಕರ ರಾವ್, ಕೆ.ಉಮೇಶ್ ರಾವ್, ಹೇರಂಜೆ ರಾಮಚಂದ್ರ ರಾವ್ ಮೊದಲಾದವರು ಪ್ರಫುಲ್ಲಚಂದ್ರರಾಯರ ಕೌಟುಂಬಿಕ ಬಾಂಧವ್ಯದ ಬಗ್ಗೆ ತಿಳಿಸುತ್ತಾ, ಕುಟುಂಬದ ಪರವಾಗಿ ಆಗಮಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.

ಟಿ.ವಿಶ್ವನಾಥ ಶ್ಯಾನುಭಾಗ್ ಕಾರ್ಯಕ್ರಮ ನಿರೂಪಿಸಿದ್ದರು. ಪ್ರಪುಲ್ಲಚಂದ್ರರಾಯರ ಧರ್ಮಪತ್ನಿ ಶ್ರೀಮತಿ ಪೂರ್ಣಿಮಾ ಪಿ ರಾವ್, ಸಹೋದರ ವಿಜಯ ಚಂದ್ರರಾವ್, ಪುತ್ರ ಪ್ರತೀಕ್ ರಾವ್, ಸೊಸೆ ಅರ್ಪಿತಾ ರಾವ್, ಸಹೋದರಿಯರು, ಬಂಧುಗಳು, ಅಭಿಮಾನಿಗಳು ಉಪಸ್ಥಿತರಿದ್ದರು.

ಅಂದು ಪ್ರಪುಲ್ಲಚಂದ್ರರಾಯರ ಶ್ರದ್ಧಾಂಜಲಿ ಸಭೆಯಲ್ಲಿ ಉಪಸ್ಥಿತರಿದ್ದ, ಅವರಿಗೆ ನುಡಿನಮನ ಸಲ್ಲಿಸಿದ ಎಲ್ಲಾ ಬಂಧುಗಳಿಗೆ, ಅಭಿಮಾನಿಗಳಿಗೆ ಪುತ್ರ ಪ್ರತೀಕ್ ರಾವ್ ಕೃತಜ್ಞತೆ ಸಲ್ಲಿಸಿದ್ದಾರೆ.

# ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ(ನಿ.) ಪ್ರಪುಲ್ಲಚಂದ್ರರಾಯರಿಗೆ ಶ್ರದ್ಧಾಂಜಲಿ



ಉಡುಪಿಯ ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ವತಿಯಿಂದ ಶಿವೈಕ್ಯರಾದ ಪ್ರಪುಲ್ಲಚಂದ್ರರಾಯರಿಗೆ ಶ್ರದ್ಧಾಂಜಲಿ ಸಭೆಯನ್ನು ಆಯೋಜಿಸಲಾಗಿತ್ತು. ಸೊಸೈಟಿಯ ಅಧ್ಯಕ್ಷರಾದ ಶ್ರೀ ಸದಾನಂದರಾಯರು ಆಗಮಿಸಿದ್ದ ಎಲ್ಲರನ್ನು ಸ್ವಾಗತಿಸಿ, ಮಾತನಾಡುತ್ತಾ ಪ್ರಪುಲ್ಲಚಂದ್ರರಾಯರು ಸೊಸೈಟಿಯ ಪ್ರಾರಂಭದಿಂದ ಇದುವರೆಗೆ ನೀಡಿದ ಸೇವೆಗಳನ್ನು ನೆನಪಿಸಿಕೊಂಡರು. ಉಪಾಧ್ಯಕ್ಷರಾದ ಶ್ರೀ ಯು.ಅರವಿಂದ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಪ್ರಪುಲ್ಲಚಂದ್ರರಾಯರು ಸೊಸೈಟಿಯ ಪ್ರವರ್ತಕರಾಗಿ ಇಲಾಖೆಯ ಅಧಿಕಾರಿಗಳೊಂದಿಗೆ ಸಂಪರ್ಕ, ನಿರ್ದೇಶಕರಾಗಿ ಮಾಡಿದ್ದ ಕೆಲಸ, ಸೊಸೈಟಿಯ ಮುನ್ನಡೆಗೆ ಅವರ ಕೊಡುಗೆ, ಶಾಖೆಗಳ ಸ್ಥಾಪನೆಗೆ ಪಟ್ಟ ಶ್ರಮ ಮೊದಲಾದುವುಗಳನ್ನು ವಿವರಿಸಿದರು. ಸಂಸ್ಥೆಯ ಕಾಯದರ್ಶಿಯಾಗಿದ್ದು, ನಂತರ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದ ಶ್ರೀ ವೇಣುಗೋಪಾಲ್ ರಾವ್ ಪ್ರಪುಲ್ಲಚಂದ್ರರಾಯರ ಒಡನಾಟದೊಂದಿಗೆ ಸೊಸೈಟಿ ಪ್ರಮುಖ ನಿರ್ಧಾರಗಳನ್ನು ಕೈಗೊಂಡು ಅಭಿವೃದ್ಧಿಯ ಪಥದಲ್ಲಿ ಸಾಗಲು ಕಾರಣವಾಯಿತು ಎಂದು ಹೇಳಿದರು.

ಮಾಜಿ ಉಪಾಧ್ಯಕ್ಷ ಶ್ರೀ ಸಿ.ಎಸ್.ರಾವ್, ಮಾಜಿ ನಿರ್ದೇಶಕ ಶ್ರೀ ಮಂಜುನಾಥ ಹೆಬ್ಬಾರ್, ನಿರ್ದೇಶಕ ಶ್ರೀ ಗಣೇಶರಾವ್ ಕುಂಭಾಶಿ, ಸಲಹೆಗಾರರಾದ ಶ್ರೀ ಯಂ ಕೆ ದಿವಾಕರರಾವ್,ಶ್ರೀ ಉದಯರಾವ್ ಮೊದಲಾದವರು ನುಡಿನಮನ ಸಲ್ಲಿಸಿದರು. ನಿರ್ದೇಶಕ ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು ದಿವಂಗತರ ಶ್ರದ್ಧಾಂಜಲಿ ಪತ್ರವನ್ನು ವಾಚಿಸಿದರು. ಮತ್ತು ಅಧ್ಯಕ್ಷರು ಅದನ್ನು ಪುತ್ರ ಪ್ರತೀಕ್ ರಾವ್ ಅವರಿಗೆ ಒಪ್ಪಿಸಿದರು. ಇದರೊಂದಿಗೆ ಸಾಲಿಗ್ರಾಮದ ಶ್ರೀ ಗುರು ನರಸಿಂಹ ವಿವಿದೋದ್ದೇಶ ಸಹಕಾರಿ ಸಂಘದ ವತಿಯಿಂದ ಕಾರ್ಯದರ್ಶಿ ಶ್ರೀ ಜಿ.ಎಸ್.ಸೋಮಯಾಜಿ ಸಲ್ಲಿಸಿದ್ದ ಶ್ರದ್ಧಾಂಜಲಿ ಪತ್ರವನ್ನೂ ವಾಚಿಸಿ ಅವರಿಗೆ ನೀಡಲಾಯಿತು. ಸೊಸೈಟಿಯ ಕಾರ್ಯದರ್ಶಿ ಶ್ರೀ ಪಟ್ಟಾಭಿರಾಮರಾಯರು ಕಾರ್ಯಕ್ರಮ ನಿರೂಪಿಸಿ ವಂದನಾರ್ಪಣೆ ಮಾಡಿದರು.

ಸಾಮೂಹಿಕ ಮೌನ ಪ್ರಾರ್ಥನೆಯೊಂದಿಗೆ ಶ್ರದ್ಧಾಂಜಲಿ ಸಲ್ಲಿಸಿದ ಈ ಸಭೆಯಲ್ಲಿ ಸೊಸೈಟಿಯ ನಿರ್ದೇಶಕರು, ಮಾಜಿ ನಿರ್ದೇಶಕರು, ಸೊಸೈಟಿಯ ನಾಲ್ಕೂ ಶಾಖೆಗಳ ಸಿಬ್ಬಂಧಿವರ್ಗ, ಸದಸ್ಯರು ಪ್ರಪುಲ್ಲಚಂದ್ರರಾಯರ ಧರ್ಮಪತ್ನಿ ಶ್ರೀಮತಿ ಪೂರ್ಣಿಮಾ ಪಿ ರಾವ್, ಪುತ್ರ ಶ್ರೀ ಪ್ರತೀಕ್ ರಾವ್ ಮತ್ತು ಮನೆಯವರು, ಹಾಗೂ ಪ್ರಪುಲ್ಲಚಂದ್ರರಾಯರ ಆಭಿಮಾನಿಗಳು ಪಾಲ್ಗೊಂಡಿದ್ದರು.

# ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘದಲ್ಲಿ ಶ್ರದ್ಧಾಂಜಲಿ ಕಾರ್ಯಕ್ರಮ

ಫೆಬ್ರವರಿ ತಿಂಗಳಲ್ಲಿ ನಡೆದ ಸ್ಥಾನಿಕ ಬ್ರಾಹ್ಮಣ ಸಂಘದ ಆಡಳಿತ ಮಂಡಳಿಯ ಸಭೆಯಲ್ಲಿ ಅಧ್ಯಕ್ಷರಾದ ಕೆ. ಮಂಜುನಾಥ ಹೆಬ್ಬಾರರು ಇತ್ತೀಚೆಗೆ ನಮ್ಮನ್ನಗಲಿದ ಸಂಘದ ಸಲಹೆಗಾರರಾಗಿದ್ದ ಯು. ಪ್ರಫುಲ್ಲಚಂದ್ರರಾವ್ ಬಗ್ಗೆ ಮಾತನಾಡುತ್ತಾ ಅವರು ನಮ್ಮ ಸಂಘದಲ್ಲಿ ಯುವ ವಿಭಾಗದ ಅಧ್ಯಕ್ಷರಾಗಿ ಸ್ಥಾನಿಕ ಬ್ರಾಹ್ಮಣ ಸಂಘದಲ್ಲಿ ಜೊತೆ ಕಾರ್ಯದರ್ಶಿಯಾಗಿ, ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಮತ್ತು ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದು ತಾ.03.02.2022ರಂದು ನಮ್ಮನ್ನು ಅಗಲಿದ್ದಾರೆ ಎಂದು ತಿಳಿಸಿ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಸಭೆಯು ಅವರ ಸದ್ಗತಿಗಾಗಿ ಒಂದು ನಿಮಿಷದ ಮೌನ ಪ್ರಾರ್ಥನೆಯನ್ನು ಸಲ್ಲಿಸಿತು. ಈ ಸಂದರ್ಭದಲ್ಲಿ ಸಂಘದ ಆಡಳಿತ ಮಂಡಳಿಯ ಸದಸ್ಯರು, ಸಲಹೆಗಾರರು, ಪದಾಧಿಕಾರಿಗಳು ಉಪಸ್ಥಿತರಿದ್ದರು.






Owned, Published & Edited by : Sri Y. Muralikrishna Rao onbehalf of Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 2958444
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org